ಓ.ಎಸ್. ನಂ. 22/2017

ಡಿ.ಡಬ್ಲ್ಯು: 01 (ಇಸಾಕ್ ಸಾಹೇಬ್)

ದಿನಾಂಕ: 18.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: ವಾದಿ ಪರ – ಶ್ರೀ BSP ವಕೀಲರಿಂದ.

ನಾನು ಹಾಜರುಪಡಿಸಿರುವ ಮ್ಯುಟೇಶನ್ ಪತ್ರ ಅಂದರೆ ನಿಡಿ 3 ರಲ್ಲಿ ಇರುವ ಆಸ್ತಿ ನನ್ನ ತಂದೆಯ ಕಡೆಯಿಂದ ತಾಯಿಗೆ ಪೋತಿವಾರಸು ಮೂಲಕ ಬಂದಿದೆ ಎಂದರೆ ಹೌದು. ನನ್ನ ತಂದೆಗೆ ಅವರ ತಂದೆಯ ಕಡೆಯಿಂದ ಪೋತಿವಾರಸು ಆಧಾರದ ಮೇಲೆ ಬಂದಿದೆ ಎಂದರೆ ಹೌದು. ನಿಡಿ 4 ಕ್ರಯ ಪತ್ರದಲ್ಲಿರುವ ಆಸ್ತಿಯನ್ನು ನನ್ನ ಅಜ್ಜ ಬಕೂರ್ ಸಾಬ್ ಖರೀದಿ ಮಾಡಿರುತ್ತಾರೆ. ಅದು ದಾವಾ ಆಸ್ತಿಯ ಐಟಂ ನಂಬರ್ 5-8 ಆಸ್ತಿಯಾಗಿರುತ್ತದೆ ಎಂದರೆ ಹೌದು. ಅದನ್ನು ಇಮಾಮ್‌ಬೀ ಪೋತಿವಾರಸು ಪ್ರಕಾರ ವರ್ಗಾವಣೆ ಮಾಡಿಸಿಕೊಂಡಿದ್ದರು ಎಂದರೆ ಹೌದು. ಇಮಾಮ್‌ಬೀ ಬಕೂರ್ ಸಾಬ್ ಅವರ ಹೆಂಡತಿ. ದಿ: 21.12.1992 ರಂದು ನನಗೆ ಮರಣ ಶಾಸನ ಮೂಲಕ ಬರೆದುಕೊಟ್ಟಿರುತ್ತಾರೆ ಎಂದರೆ ಹೌದು. ನನ್ನ ತಾಯಿಗೆ ಅದನ್ನು ಬರೆದುಕೊಡುವ ಸಂಪೂರ್ಣ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಅದರಲ್ಲಿ ಅವರ ಮಕ್ಕಳಿಗೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

2005 ಪಾಲು ವಿಭಾಗದಲ್ಲಿ ನಮ್ಮ ಅಕ್ಕತಂಗಿಯರನ್ನು ಸೇರಿಸಿರುವುದಿಲ್ಲ ಎಂದರೆ ಹೌದು. ದಾವಾ ಸ್ವತ್ತು 1 ಮತ್ತು 2 ನ್ನು ಪಾಲು ವಿಭಾಗದಲ್ಲಿ ಸೇರಿಸಿರುವುದಿಲ್ಲ. ಮರಣ ಶಾಸನದಲ್ಲಿರುವ ಆಸ್ತಿಯನ್ನು ಬಕೂರ್ ಸಾಬ್ ಅವರ ಮಕ್ಕಳಿಗೆ ನೀಡಬೇಕಾಗುತ್ತದೆ ಎಂದು ಪಾಲು ವಿಭಾಗ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಐಟಂ ನಂಬರ್ 5-8 ರಲ್ಲಿ ಈಗ ಮನೆ ಕಟ್ಟಿಸಿಕೊಂಡಿದ್ದೇವೆ ಎಂದರೆ ಹೌದು. ಮನೆ ಕಟ್ಟಿಸಲು ನಾನು ಹೇಳಿದಂತೆ ಸಾಲ ಪಡೆದಿರುವುದಿಲ್ಲ, ಸದರಿ ಸಾಲವನ್ನು ಬೇರೆ ಉದ್ದೇಶಕ್ಕೆ ಉಪಯೋಗಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಗೆ ಭಾಗ ಕೊಡುವುದನ್ನು ತಪ್ಪಿಸಲು ಇಂತಹ ದಾಖಲಾತಿಗಳನ್ನು ಸೃಷ್ಟಿಸಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ 1986 ರ ಕರಾರು ಪತ್ರದ ಬಗ್ಗೆ ಉಲ್ಲೇಖ ಇದ್ದು, ಆ ದಾಖಲಾತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ಹಾಜರುಪಡಿಸದೇ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ನಾನು ಹಾಜರುಪಡಿಸಿರುವ ದಾಖಲಾತಿಗಳ ಪೈಕಿ ಯಾವುದೇ ಕ್ರಯ ಪತ್ರ ಇಲ್ಲದೇ ಇರುವ ಕಾರಣ ಅದನ್ನು ಪ್ರಶ್ನಿಸಲು ಬರುವುದಿಲ್ಲ ಎಂದರೆ ಸರಿಯಲ್ಲ.

ಓ.ಎಸ್. ನಂ. 22/2017

ಡಿ.ಡಬ್ಲ್ಯು: 01 (ಇಸಾಕ್ ಸಾಹೇಬ್)

ಮೌಖಿಕ ಪಾಲು ವಿಭಾಗದ ಬಗ್ಗೆ ನಾನು ಹೇಳಿದ್ದು, ಆ ರೀತಿ ಪಾಲು ವಿಭಾಗ ಆಗಿದ್ದರೆ ಯಾರಿಗೆ ಯಾವ ಭಾಗ ಬಂತು ಎಂದು ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದೆ ಎಂದರೆ ಅವರಿಗೆ ಬಂದ ಭಾಗದ ಬಗ್ಗೆ ನನಗೆ ನೆನಪಿಲ್ಲ. ದಾವಾ ಆಸ್ತಿಗಳನ್ನು ಹೊರತುಪಡಿಸಿ ಕುಟುಂಬದಲ್ಲಿ ಬೇರೆ ಆಸ್ತಿಗಳು ಯಾವವು ಇಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬೇರೆ ಆಸ್ತಿಗಳು ಇದ್ದರೆ ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಸಲ್ಲಿಸುತ್ತಿದ್ದೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಯಾವುದೇ ವಿಭಾಗ ಆಗಿರುವುದಿಲ್ಲ, ಆದ್ದರಿಂದ ವಾದಿಯವರಿಗೆ ಅವರು ಕೇಳಿರುವ ಭಾಗ ಬರಬೇಕು ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.